ಶಾಸನಗಳನ್ನು ಬರೆಸಿಕೊಂಡವು'

ಕ್ಯಾಥರೀನ್ ಕಣ್ಣಲ್ಲಿ ನೀರಿರಲಿಲ್ಲ. ಶ್ರೀನಿಧಿ ಮಾತ್ರ ತನ್ನ ಕಣ್ಣು ಒರೆಸಿಕೊಂಡ.

ಶ್ರೀನಿಧಿಯದು ಇಂತಹ ಖಂಡಾಂತರದ ಕಥೆ ಇರಲಿಲ್ಲ. ಅವನದು ಬಂಡೆಗಳ ನಾಡಿನ ಬಿಸಿಲು, ಸೆಕೆ ಮತ್ತು ಬರಗಾಲಗಳಲ್ಲೇ ಅರಳಿದ್ದ ಬದುಕು. ರಂಗಪ್ಪ ಮತ್ತು ಸುಮಿತ್ರಮ್ಮ ದಂಪತಿಗಳಿಗೆ ಮೂರು ಹೆಣ್ಣು ಹುಟ್ಟಿ, ತಿರುಪತಿ ಮೊದಲಾದ ದೇವಾಲಯಗಳ ಸುತ್ತಿ ಹರಕೆ ಕಟ್ಟಿದ ನಂತರವೇ ಹುಟ್ಟಿದ್ದ ಕಡೆಯ ಕಟ್ಟಾಣಿ ಈ ಗಂಡು ಕೂಸು – ಶ್ರೀನಿಧಿ. ಇವನು ಹುಟ್ಟುವ ಹೊತ್ತಿಗೇ ವ್ರತ ನೇಮ ನಿಷ್ಠೆಗಳಿಂದ ಬಸವಳಿದಿದ್ದ ಸುಮಿತ್ರಮ್ಮ ಮಗನನ್ನು ಅವನ ಅಕ್ಕಂದಿರ ಸುಪರ್ದಿಗೆ ಒಪ್ಪಿಸಿ ತಾವು ದೇವರೊಂದಿಗೆ ಮಾತ್ರ ಮಾತನಾಡತೊಡಗಿದ್ದರು. ಹೆಂಡತಿಯೊಂದಿಗೆ ಆಡಬೇಕಾದ ಮಾತುಗಳನ್ನು ಅನಿವಾರ್ಯವಾಗಿ ಮನೆಗೆಲಸದ ನಿಂಗಿಯ ಜೊತೆ ಆಡತೊಡಗಿದ್ದರು ರಂಗಪ್ಪ!

ತಾಯಿಗೆ ಮೂವತ್ತೈದು ಆದ ಮೇಲೆ ಹುಟ್ಟಿದ್ದ ಈ ಮಗುವಿಗೆ ಎದೆ ಹಾಲು ಸಮರ್ಪಕವಾಗಿ ಸಿಗದೇ ಅಮುಲ್ ಡಬ್ಬದ ಹಾಲೇ ಸರ್ವಸ್ವವಾಗಿದ್ದಾಗ, ಮಗುವಿಗೆ ತಾಯಿಯ ಬಿಸುಪೆಂದರೆ ಅದು ಬಾಟಲಿಗೆ ಸಿಕ್ಕಿಸಿದ್ದ ರಬ್ಬರ್ ನಿಪ್ಪಲ್ ಮಾತ್ರ. ಶ್ರೀನಿಧಿಯನ್ನು ಮಧ್ಯೆ ಮಲಗಿಸಿಕೊಂಡು ತಮ್ಮ ಎಂದಿನ ಮಾತು ನಗು ನಾಚಿಕೆಗಳಲ್ಲಿ ಕಳೆದುಹೋಗುತ್ತಿದ್ದ ಅಕ್ಕಂದಿರಿಂದಾಗಿ ಹೆಣ್ತನವನ್ನೇ ಸಹಜ ಎಂದು ಭಾವಿಸಿದ್ದ ಶ್ರೀನಿಧಿಗೆ ಇದ್ದ ಒಂದೇ ಗೊಂದಲ 'ತನಗೆ ಮಾತ್ರ ಏಕೆ ಈ ನಿಕ್ಕರ್!? ಅಕ್ಕಂದಿರಿಗೆ ಮಾತ್ರ ಪರಕಾರ' ಎಂಬುದು.

ಮಧ್ಯಾಹ್ನದ ಸಣ್ಣ ಜೊಂಪಿನ ನಂತರ ಇಬ್ಬರೂ ಸಂಜೆಯ ತಿರುಗಾಟಕ್ಕೆ ಸಿದ್ಧವಾಗಿದ್ದರು. ಶ್ರೀನಿಧಿ ಇಂಗ್ಲೆಂಡಿನ ಸಭ್ಯ ಗೃಹಸ್ಥರಂತೆ ಉದ್ದನೆಯ ಕೋಟನ್ನೇ ಧರಿಸಿದ್ದರೆ ಕ್ಯಾಥರೀನ್ ಜೀನ್ಸ್ ಮತ್ತು ಟಾಪ್ ಹಾಕಿದ್ದಳು. ಕೈ ಕೈ ಹಿಡಿದು ಪುಟ್ಟ ಮಕ್ಕಳಂತೆ ಬೀದಿ, ತಿರುವು, ದಿಬ್ಬಗಳನ್ನು ಹತ್ತಿಳಿದು ಮಾರುಕಟ್ಟೆಯ ಹೊಕ್ಕು ಬೇಕಾದ್ದು, ಬೇಡವಾದ್ದು ಖರೀದಿಸಿ ಮತ್ತೆ ರೂಂ ಹೊಗುವಾಗ ಆಗಲೇ ರಾತ್ರಿಯ ಎಂಟು ಗಂಟೆ. ಡಿನ್ನರಿಗಾಗಿ ಹೋಟೆಲ್ಲಿನ ಬ್ಯಾಂಕ್ವೆಟ್ ಹಾಲ್‌ಗೆ ಹೋಗಲೆಂದು ಕ್ಯಾಥರೀನ್ ಉದ್ದನೆಯ ಲೇಡಿ ಗೌನ್ ಧರಿಸಿ ಸಿದ್ಧವಾದರೆ ಶ್ರೀನಿಧಿ ಬೋ ಟೈ ಧರಿಸಿ ಟೈಟಾನಿಕ್ ಸಿನೆಮಾದ ಡಿ ಕ್ಯಾಪ್ರಿಯೋನಂತೆ ಅವಳ ಕೈಗೆ ತನ್ನ ತೋಳು ಕೊಟ್ಟಿದ್ದ. ಊಟಕ್ಕೆ ಮುನ್ನ ವೈನ್ ಬಂದಾಗ 'ನಾನು ಟೀ ಟೋಟ್ಲರ್' ಎಂದು ಕ್ಯಾಥರೀನ್‌ಗೆ ದಂಗುಬಡಿಸಿದ್ದ.

ಕ್ಯಾಥರೀನ್‌ಗೆ ಒಳಗಿಳಿದ ವೈನ್ ಬಿಸಿಯೇರಿಸತೊಡಗಿತ್ತು. ರೂಮಿಗೆ ಬಂದವಳೇ ಗೌನ್ ತೆಗೆದು ಒಳ ಉಡುಪೂ ಇಲ್ಲದ ಟಿ ಶರ್ಟ್ ಮತ್ತು ಶಾರ್ಟ್ಸ್ ಹಾಕಿದಾಗ ಆ ಚಳಿಯಲ್ಲೂ ಬೆವರುತ್ತಿದ್ದ ಶ್ರೀನಿಧಿ. ಕ್ಯಾಥರೀನ್ ತನ್ನ ಬ್ಯಾಗಿನಿಂದ ಪುಟ್ಟ ಎಣ್ಣೆಯ ಬಾಟಲಿ ತೆಗೆದಾಗ ಮಾತ್ರ ಉಗುಳು ನುಂಗುತ್ತಾ 'ಏನದು!? ನೀನು ಮಸಾಜ್ ಸೆಂಟರಿನಲ್ಲಿ ಬಳಸುತ್ತಿದ್ದ ತೈಲವಾ?' ಎಂದ. ಹೌದೆನ್ನುತ್ತಾ ನಸು ನಕ್ಕಳು ಕ್ಯಾಥರೀನ್. 'ನಮ್ಮ ನಡುವೆ ಇದೆಲ್ಲಾ ಬೇಕಾ ಕ್ಯಾಟಿ!? ಇದಿಲ್ಲದೆಯೂ ಡೇಟಿಂಗ್ ಮಾಡಬಹುದಲ್ವಾ?' ಎಂದಾಗ ಅಪ್ರತಿಭಳಾಗುವ ಸರದಿ ಕ್ಯಾಥರೀನ್‌ಳದ್ದು. ಬೆಳಗ್ಗೆ ಬಾತ್ ರೂಂನಲ್ಲಿ ಇವನ ನಡುಕ ಕಂಡು 'ಆರ್ ಯೂ ವರ್ಜಿನ್!?' ಎಂದವಳು ಈಗ ಮಾತ್ರ 'ಆರ್ ಯೂ ಸ್ಟ್ರೇಟ್?' ಎಂದಳು! 'ಯಸ್ ಆಫ್ಕೋರ್ಸ್' ಎಂದ ಶ್ರೀನಿಧಿ ಅವಳನ್ನು ಎತ್ತಿಕೊಂಡು ಮಂಚದ ಮೇಲೆ ಮಲಗಿಸಿ ಹಣೆಗೊಂದು ಹೂ ಮುತ್ತನಿಟ್ಟು ಗುಡ್ ನೈಟ್ ಹೇಳಿದ. ಆಗ ನಿಜಕ್ಕೂ ಕಂಪಿಸಿದ್ದು ಕ್ಯಾಥರೀನ್. ಅವನಿಗೂ ಗುಡ್ ನೈಟ್ ಹೇಳಿ ನಿಜದ ನಿಧಿ ಸಿಕ್ಕಂತೆ ಅವನ ಕೈ ಹಿಡಿದು ಮಲಗಿದ ಆಕೆಗೆ ಎಂದಿಲ್ಲದ ಸೊಗಸಾದ ನಿದ್ದೆ. ಹೊಸ ಜಾಗ, ಸ್ನೇಹಿತೆಯಾದರೂ ಅಪರಿಚಿತ ಹೆಣ್ಣ ಸ್ಪರ್ಶದಿಂದಾಗಿ ನಿದ್ರೆ ಬಾರದೇ ಹೊರಳಾಡಿದ. ಹೊರಳಾಡಿ ಹೊದಿಕೆಯ ಬಿಸುಡುತ್ತಿದ್ದಾಗ ಕಾಣುತ್ತಿದ್ದ ಅವಳ ತೊಡೆ, ಇವನೆದೆಯಲ್ಲಿ ಹುದುಗುತ್ತಿದ್ದ ಅವಳ ಮುಖ, ಮೆತ್ತಗಿದ್ದರೂ ಚುಚ್ಚುತ್ತಿದ್ದ ಅವಳ ಚೂಪು ಸಂಗತಿ... ಎಲ್ಲದರ ನಡುವೆ ಶ್ರೀನಿಧಿಗೂ ನಿದ್ದೆ ಹತ್ತಿದ್ದು ಯಾವ ಹೊತ್ತಿನಲ್ಲೋ. ಹೊಸತೇ ಆದ ಬೆಳಗಿನ ಪ್ರಭೆ ಹೊತ್ತು ಇವರು ಮಾತುಗಳನ್ನೇ ಉಂಡು ಉಟ್ಟು ಮತ್ತೆ ನಾಟ್ಟಿಂಗ್‌ಹ್ಯಾಮ್‌ಗೆ ಬಂದಾಗ ಇವರ ಮಾತುಗಳನ್ನು ಕಲ್ಪಿಸಿಕೊಳ್ಳಲಾಗದೇ ಕಕ್ಕಾಬಿಕ್ಕಿಯಾದವನು ವಿಲಿಯಂ!

ಇದೆಲ್ಲಾ ಆಗಿ ನಾಲ್ಕಾರು ವರ್ಷಗಳೇ ಆಗಿವೆ. ಶ್ರೀನಿಧಿ ಈಗ ಬೆಂಗಳೂರಿನ ಕೆಮಿಕಲ್ ಫ್ಯಾಕ್ಟರಿ ಒಂದರಲ್ಲಿ ಸೈಂಟಿಸ್ಟ್ ಆಗಿದ್ದಾನೆ. ಅಪ್ಪನಿಂದ ದೂರವಿರಲೆಂದೇ ನಾಟ್ಟಿಂಗ್‌ಹ್ಯಾಮ್‌ಗೆ ಬಂದಿದ್ದ ಕ್ಯಾಥರೀನ್ - ಡ್ರಗ್